ಶ್ರೀ ಎಂ.ವೀರಪ್ಪಮೊಯಿಲಿ : ಅದರ ಅವಶ್ಯಕತೆ ಇಲ್ಲ.

(Interruptions)

(ಶ್ರೀ ಆರ್.ವಿ.ದೇಶಪಾಂಡೆಯವರು ಮತ್ತು ಜನತಾದಳದ ಶಾಸಕರು ಸಭ್ಯಾತ್ಯಾಗ ಮಾಡಿದರು)

ಉಪಾಧ್ಯಕ್ಷರು :- ವಿರೋಧಪಕ್ಷದ ನಾಯಕರ ನೋಟಿಸ್‌ಗೆ ಸಂಬಂಧಪಟ್ಟಂತಹ ಸಚಿವರು ದೀರ್ಘವಾದ ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಪೂರಕವಾಗಿ ಮಾನ್ಯ ಮುಖ್ಯಮಂತ್ರಿಯವರು ಸಮಂಜಸವಾಗಿ ಉತ್ತರ ಕೊಟ್ಟಿರುವುದರಿಂದ ಈ ಚರ್ಚೆಯನ್ನು ಮುಕ್ತಾಯಗೊಳಿಸಿ, ಈಗ ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕವನ್ನು ನಗರಾಭಿವೃದ್ಧಿ ಮತ್ತು ವಕ್ಫ್ ಮಂತ್ರಿಗಳು ಮಂಡಿಸುವುದು.

ಶಾಸನ ರಚನಾಕೂಟ

1994 ರ ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಮತ್ತು ವಕ್ಫ್ ಮಂತ್ರಿಗಳು) : - ಮಾನ್ಯ ಅಧ್ಯಕ್ಷರೆ, 1994 ರ ಕರ್ನಾಟಕ ನಗರ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಸಿ.ಬೈರೇಗೌಡ :- ಮಾನ್ಯ ಉಪಾಧ್ಯಕ್ಷರೇ, ದಯಮಾಡಿ ಏನು ಒಂದು ಸಂಪ್ರದಾಯವನ್ನು ನಾವು ಇಲ್ಲಿ ಅನುಸರಿಸಿಕೊಂಡು ಬಂದಿದ್ದೇವೆ, ಅದರಂತೆ ಮಾನ್ಯ ಮಂತ್ರಿಗಳು ಈ ತಿದ್ದುಪಡಿ ಬಿಲ್ ಬಗ್ಗೆ ವಿವರಣೆ ಕೊಡಲಿ.

ಉಪಾಧ್ಯಕ್ಷರು : ಅವರು ಹೇಳುತ್ತಾರೆ ತಾವು ಕುಳಿತುಕೊಳ್ಳಿ. ವಾಕ್ ಔಟ್ ಹೋಗಿ, ಈಗ ಒಂದು ಸಂಪ್ರದಾಯ ಎಂದು ಹೇಳುತ್ತೀರಿ. ಇನ್ನು ಏನು ಹೇಳುವುದು? ಮಂತ್ರಿಗಳೇ ಹೇಳಿ...

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ನಗರ ಪ್ರದೇಶಗಳಲ್ಲಿನಿರ್ಮಾಣ ವಾದಂತಹ ಮನೆಗಳನ್ನು ಸಕ್ರಮಗೊಳಿಸುವುದಕ್ಕಾಗಿ,, ಈ ವಿಧೇಯಕವನ್ನು ಈ ಸಭೆಯಲ್ಲಿ ಮಂಡಿಸಿದ್ದೇನೆ. ಈ ಒಂದು ವಿಧೇಯ 1991ನೇ ಇಸವಿಯವರೆಗೆ ಜಾರಿಯಲ್ಲಿದ್ದು ಇನ್ನು ಮುಂದೆ 1-8-94ರವರೆಗೆ ಅದರ ಅವಧಿಯನ್ನು ವಿಸ್ತರಿಸಿ, ಈ ಅನಧಿಕೃತವಾಗಿ ನಿರ್ಮಾಣವಾದಂತಹ ಮನೆಗಳ ಜನರು ಅರ್ಜಿಗಳನ್ನು ಕೊಡುವುದಕ್ಕಾಗಿ ಸಮಯವನ್ನು ವಿಸ್ತರಿಸಬೇಕೆಂದು ನಾವು ಈ ಮಸೂದೆಯನ್ನು ತಂದಿದ್ದೇವೆ. ದಿನಾಂಕ 30-9-94ರವರೆಗೆ ಈ ಸಮಯವನ್ನು ವಿಸ್ತರಿಸಬೇಕೆಂದು ನಾವು